**ವಿಷಯ:-** ಬಿಳಿಗಿರಿ ರಂಗನ ಬೆಟ್ಟದ ದೇವಸ್ತಾನದ ದುರಸ್ತಿ.

74(73)

ಶ್ರೀ ರಾಮಲಿಂಗಾರೆಡ್ಡಿ, (ಜಯನಗರ):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮೈಸೂರು ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದ ಮೇಲಿರುವ ಬಿಳಿಗಿರಿ ರಂಗಸ್ವಾಮಿ ದೇವಸ್ಥಾನದಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಅಂದಾಜು ಆದಾಯವೆಷ್ಟು;

ಆ) ಈ ದೇವಸ್ಥಾನ ದುರಸ್ತಿ ಕಾರ್ಯಗಳಿಗೆ ಸರ್ಕಾರದವರು 1996-97ರಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು;

ಇ) ಈ ದೇವಸ್ಥಾನದ ದುರಸ್ಥಿ ಕಾರ್ಯಗಳನ್ನು ಪೂರ್ಣಗೊಳಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):-

ಅ) ಶ್ರೀ ಬಿಳಿಗಿರಿ ರಂಗಸ್ವಾಮಿ ದೇವಸ್ಥಾನದಿಂದ ಸರ್ಕಾರಕ್ಕೆ ಆದಾಯ ಬರುವುದಿಲ್ಲ.

ಆ) 1996-97ನೇ ಸಾಲಿನಲ್ಲಿ ಸರ್ಕಾರದಿಂದ ಯಾವುದೇ ಅನುದಾನ ಮಂಜೂರಾಗಿಲ್ಲ.

ಇ) ದೇವಾಲಯದ ದುರಸ್ಥಿ ಕಾರ್ಯಕ್ಕಾಗಿ ಯಾವುದೇ ನಿರ್ದಿಷ್ಟ ಪ್ರಸ್ತಾವನೆ ಈವರೆಗೆ ಸರ್ಕಾರಕ್ಕೆ ಬಂದಿರುವುದಿಲ್ಲ.

**ವಿಷಯ:-** ಮುಜರಾಯಿ ಇಲಾಖೆಯ ದೇವಸ್ಥಾನಗಳ ದುರಸ್ತಿ.

75(166)

ಶ್ರೀ ಹೆಚ್. ಶಿವಪ್ಪ (ಹರಿಹರ):- ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮುಜರಾಯಿ ಇಲಾಖೆಗೆ ಸೇರಿದ ಎಷ್ಟು ದೇವಾಲಯಗಳು ಶಿಥಿಲಾವಸ್ಥೆಯಲ್ಲಿರುತ್ತವೆ; (ಜಿಲ್ಲಾವಾರು ವಿವರ ನೀಡುವುದು).

ಆ) ಹಾಗಿದ್ದಲ್ಲಿ ಈ ದೇವಾಲಯಗಳ ದುರಸ್ಥಿ: ಜೀರ್ಣೋದ್ಧಾರ ನಿರ್ಮಾಣಕ್ಕೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):-

ಅ) ರಾಜ್ಯದಲ್ಲಿ ಸುಮಾರು 391 ದೇವಾಲಯಗಳು ಶಿಥಿಲಾವಸ್ಥೆಯಲ್ಲಿವೆ ಎಂದು ತಿಳಿದುಬಂದಿದೆ. (ಜಿಲ್ಲಾವಾರು ಮಾಹಿತಿ ಪಟ್ಟಿ ಲಗತ್ತಿಸಿದೆ).

ಆ) ಪ್ರತಿವರ್ಷ ಆಯಾವ್ಯಯದಲ್ಲಿ ಈ ಬಗ್ಗೆ ಒದಗಿಸುವ ಅನುದಾನದ ಲಭ್ಯತೆಯನ್ನು ಆಧರಿಸಿ ಈ ದೇವಾಲಯಗಳ ಜೀರ್ಣೋದ್ಧಾರವನ್ನು ಕ್ರಮೇಣ ಕೈಗೆತ್ತಿಕೊಳ್ಳಲಾಗುವುದು.

ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳನ್ನು ದುರಸ್ಥಿ ಹಾಗೂ ಜೀರ್ಣೋದ್ಧಾರಗೊಳಿಸಲು ಸಹಾಯಧನ ಕೋರಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳ ಜಿಲ್ಲಾವಾರು ವಿವರ.

| ಕ್ರಮ ಸಂಖ್ಯೆ | ಜಿಲ್ಲೆಗಳು | ಪ್ರಸ್ತಾವನೆ ಸಲ್ಲಿಸಿರುವ ಮುಜರಾಯಿ ದೇವಾಲಯಗಳ ಸಂಖ್ಯೆ. |
|---|---|---|
| 1. | ಬೆಳಗಾವಿ | 36 |
| 2. | ಧಾರವಾಡ | 39 |
| 3. | ಉತ್ತರ ಕನ್ನಡ | 27 |
| 4. | ಬಿಜಾಪುರ | 13 |
| 5. | ದಕ್ಷಿಣ ಕನ್ನಡ | 45 |
| 6. | ಕೊಡಗು | 4 |
| 7. | ಬೀದರ್ | 9 |
| 8. | ಗುಲ್ಬರ್ಗಾ | 9 |
| 9. | ರಾಯಚೂರು | 21 |
| 10. | ಬಳ್ಳಾರಿ | 36 |
| 11. | ತುಮಕೂರು | 28 |
| 12. | ಬೆಂಗಳೂರು ನಗರ | 9 |
| 13. | ಬೆಂಗಳೂರು ಗ್ರಾಮಾಂತರ | 18 |
| 14. | ಕೋಲಾರ | 5 |
| 15. | ಮೈಸೂರು | 66 |
| 16. | ಚಿತ್ರದುರ್ಗ | 18 |
| 17. | ಮಂಡ್ಯ | 16 |
| 18. | ಹಾಸನ | 29 |
| 19. | ಚಿಕ್ಕಮಗಳೂರು | 9 |
| 20. | ಶಿವಮೊಗ್ಗ | 14 |
| | ಒಟ್ಟು | 391 |